International Journal of Kannada Research
www.kannadajournal.com

ISSN: 2454-5813
IJKR 2024; 10(2): 46-50
© 2024 IJKR
www.kannadajournal.com
Received: 03-03-2024
Accepted: 07-04-2024

**ಡಾ. ಅನುಪಮ ಹೆಚ್. ಎಸ್**
ಪ್ರಾಧ್ಯಾಪಕರು, ಕನ್ನಡ ವಿಭಾಗ, ಶೇಷಾದ್ರಿಪುರಂ ಪಿಯುಸಿ ಕಾಲೇಜ್, ಕೆಂಗೇರಿ, ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ಡಾ. ಅನುಪಮ ಹೆಚ್. ಎಸ್**
ಪ್ರಾಧ್ಯಾಪಕರು, ಕನ್ನಡ ವಿಭಾಗ, ಶೇಷಾದ್ರಿಪುರಂ ಪಿಯುಸಿ ಕಾಲೇಜ್, ಕೆಂಗೇರಿ, ಬೆಂಗಳೂರು, ಕರ್ನಾಟಕ, ಭಾರತ

# ಭಾರತ ಸಿಂಧು ರಶ್ಮಿ – ಪೂರ್ವಾಪರ ಕಾಂಡ

**ಡಾ. ಅನುಪಮ ಹೆಚ್. ಎಸ್**

**ಪೀಠಿಕೆ**

ಸಾಹಿತ್ಯ ಕ್ಷೇತಯ್ರದಲ್ಲಿ ಕೊಡುವ ಭಾರತದ ಉನ್ನತ ಪ್ರಶಸ್ತಿ 'ಜ್ಞಾನಪೀಠ ಪ್ರಶಸ್ತಿ' ಕನ್ನಡ ಭಾಷೆಗೆ ಎಂಟು ಜ್ಞಾನಪೀಟ ಪ್ರಶಸ್ತಿಗಳು ಲಭಿಸಿರುವುದು ಕನ್ನಡಿಗರ ಹೆಮ್ಮೆ. ಈ ಪ್ರಶಸ್ತಿಗೆ ಪಾತ್ರವಾದ ಕೃತಿಗಳನ್ನು ವಿಚಾರ ಸಂಕೀರಣದ ವಿಷಯವಾಗಿ ನೀಡಿ, ಅವುಗಳ ಬಗ್ಗೆ ಅರಿವನ್ನು ಪಡೆಯಲು ಅವಕಾಶ ಮಾಡಿಕೊಟ್ಟ ಆಯೋಜಕರಿಗೆ ಧನ್ಯವಾದಗಳು.

1990ರಲ್ಲಿ ವಿ.ಕೃ.ಗೋಕಾಕರಿಗೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಅವರ ಕಾವ್ಯ "ಭಾರತ ಸಿಂಧು ರಶ್ಮಿ". ಆಧುನಿಕ ಕನ್ನಡದ ಶಿಷ್ಟಿ ಮಹಾಕಾವ್ಯಗಳ ಪರಂಪರೆಯಲ್ಲಿ ಈ ಕಾವ್ಯಕ್ಕೊಂದು ಮಹತ್ವದ ಸ್ಥಾನವಿದೆ. ಇದು ಕ್ರಿ.ಪೂ 2000 ವರ್ಷಗಳ ಹಿಂದಿನ ವೇದಕಾಲದ ಆರ್ಯಭಾರತ, ವೈದಿಕ–ದ್ರಾವಿಡ ವಸ್ತುಗಳ ಸಮಾಜದ ನಡುವೆ ಸೃಷ್ಟಿಯಾದ ಆರ್ಯವರ್ತದ ವಿಸ್ತರಣ ಕಥನವನ್ನು ಹೊಂದಿದೆ. ಈ ಕಾವ್ಯ ಓದಲು ಸಾಕಷ್ಟು ಸಿದ್ಧತೆಯನ್ನು ಬಯಸುತ್ತದೆ. ವೇದ, ಪುರಾಣ, ಇತಿಹಾಗಳೆಲ್ಲದರ ತಿಳುವಳಿಕೆಯನ್ನು ಪಡೆದು ಕಾವ್ಯಪ್ರವೇಶ ಮಾಡಿದರೆ ಮಾತ್ರ ಅದು ನಮ್ಮ ಅರಿವಿಗೆ ದಕ್ಕುತ್ತದೆ.

**ಉದ್ದೇಶ ಮತ್ತು ವ್ಯಾಪ್ತಿ:** ಎರಡು ಸಂಪುಟಗಳ ಇಡೀ ಕಾವ್ಯವನ್ನು ಓದಲು ಸಮಯ ಮತ್ತು ತಾಳ್ಮೆ ಎರಡರ ಅನಿವಾರ್ಯತೆಯೂ ಇದೆ. ಆತುರದಲ್ಲಿ ಅರೆಬರೆ ಓದಿ ಪ್ರಬಂಧ ರಚನೆ ಮಾಡುವುದಕ್ಕಿಂತ ಸ್ವಲ್ಪವನ್ನೇ ಓದಿದರೂ ತಿಳಿದು ಓದಬೇಕು, ತಿಳಿದು ಪ್ರಬಂಧ ಮಂಡನೆ ಮಾಡಬೇಕು ಎಂಬ ಉದ್ದೇಶದಿಂದ, ಅದಲ್ಲದೇ ಭಾರತ ಸಿಂಧು ರಶ್ಮಿ ಕಾವ್ಯದ ಆರಂಭವನ್ನು ಸರಿಯಾಗಿ ಅರ್ಥೈಸಿಕೊಳ್ಳದೆ ಮುಂದಿನ ಭಾಗಗಳನ್ನು ಓದಲು ಸಾಧ್ಯವಿಲ್ಲ ಎಂದೆನಿಸಿದ್ದರಿಂದ ಇಡೀ ಕಾವ್ಯವನ್ನು ಸ್ಥೂಲವಾಗಿ ಗಮನಿಸಿ, ಕಾವ್ಯದ ಪೀಠಿಕಾಸಂಧಿ ಹಾಗೂ ಪೂರ್ವಾಪರ ಕಾಂಡಗಳನ್ನು ಅನುಲಕ್ಷಿಸಿ ಈ ಪ್ರಬಂಧವನ್ನು ಸಿದ್ಧಮಾಡಿದ್ದೇನೆ.

**ಫಲಿತಗಳು**

1. ಗೋಕಾಕರು ಈ ಕಾಂಡದಲ್ಲಿ ಸ್ವಯಂಭು ಮನು ಮತ್ತು ಶತರೂಪೆಯರು ಒಂದೇ, ಹಾಗೇ ವೃತ್ತಿಯಿಂದ ಚಾತುರ್ವರ್ಣಗಳು ರೂಪುಗೊಂಡವು ಹುಟ್ಟಿನಿಂದಿಲ್ಲ ಎಂದು ಸಾರುತ್ತಾ ಸ್ತ್ರೀ ಪುರುಷರ ಮತ್ತು ಎಲ್ಲ ಜನರು ಒಂದೇ ಅವರಲ್ಲಿ ಯಾವ ಶ್ರೇಣೀಕರಣವೂ ಇಲ್ಲ ಎಂಬ ಮಹತ್ತವಾದ ಸಂದೇಶವನ್ನು ನೀಡುವ ಮೂಲಕ ಕಾವ್ಯ ಪ್ರಸ್ತುತವಾಗುತ್ತದೆ.
2. ಆರ್ಯರ ಆಗಮನದಿಂದ ನಾಗರೀಕತೆಯ ಪ್ರವೇಶವಾಯಿತು ಎನ್ನುವಾಗ ಕವಿ ಆರ್ಯಪ್ರೇಮಿಯಾಗಿ ಕಾಣುತ್ತಾರೆ.
3. ಸ್ತ್ರೀ – ಪುರುಷರು ಪ್ರಾಣಿಗಳಂತಿರಬಾರದು, ಸಂಬಂಧಗಳ ಮೌಲ್ಯಗಳನ್ನು ಅರಿತು ಬಾಳಬೇಕು ಎಂಬ ಸಂದೇಶವೂ ಇಲ್ಲಿ ಒಡಮೂಡಿದೆ.
4. ಸಮಾನತೆಯನ್ನು ಬಯಸುವ ಗೋಕಾಕರು ಹೆಣ್ಣಿನ ವಿಷಯದಲ್ಲಿ ಹೆಣ್ಣು ಕಾಮುಕಳು, ಆಸೆಬುರುಕಳು ಎಂಬ ಪರಂಪರಾಗತವಾದ ಸಿದ್ಧ ಮಾದರಿಯನ್ನೇ ಹೇಳುತ್ತಾರೆ.
5. ದೇವರು, ಧರ್ಮಗಳ ಹೆಸರಿನ ಹೋರಾಟ ವೇದಕಾಲದಿಂದಲೇ ಆರಂಭವಾಗಿದ್ದು, ಉಪಾಸನೆಯ ಸ್ವಾತಂತ್ರ್ಯವೊಂದೇ ಇದಕ್ಕೆ ಪರಿಹಾರ ಎಂದು ಸೂಚಿಸುತ್ತಾರೆ.

6. ವೇದಕಾಲದ ಕಥೆಯನ್ನು ಹೇಳುತ್ತಾ ಇತಿಹಾಸ ವಿಚಾರಗಳನ್ನು ಬೆಸೆಯು ಬರದಲ್ಲಿ ಕಾವ್ಯದಲ್ಲಿ ಅಸಂಬದ್ಧತೆ ರೂಪಿಸಿದ್ದಾರೆ.
7. ಮನುಷ್ಯತನ ಅಗತ್ಯಗಳು ಅವರನ್ನು ಸಂಶೋಧನೆಗಳತ್ತ ಕರೆದುಕೊಂಡು ಹೋಗಿರುವ ರೀತಿ ಉತ್ತಮವಾಗಿ ಒಡಮೂಡಿದೆ.
8. ಆದಿಮಾನವನಿಂದ ಹಂತ ಹಂತವಾಗಿ ರೂಪುಗೊಂಡ ಸಂಸ್ಕೃತಿಯ ಮಾರ್ಗವೂ ಈ ಕಾವ್ಯಭಾಗದಲ್ಲಿ ಗೋಚರವಾಗುತ್ತದೆ.

### ವಿ. ಕೃ. ಗೋಕಾಕ್

ಶ್ರೀ ವಿನಾಯಕ ಕೃಷ್ಣ ಗೋಕಾಕ್‌ರು ದಿನಾಂಕ 09-08-1909ರಲ್ಲಿ ಸವಣೂರಿನಲ್ಲಿ ಜನಿಸಿದರು. ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳೆರಡರಲ್ಲೂ ವಿಶೇಷ ಆಸಕ್ತಿಯನ್ನು ಹೊಂದಿದ್ದ ಗೋಕಾಕರು ಸಂಸ್ಕೃತವನ್ನು ಬಲ್ಲವರಾಗಿದ್ದರು. ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿ ಹಾಗೂ ಜ್ಞಾನಪೀಠ ಪ್ರಶಸ್ತಿಗಳನ್ನು ಗಳಿಸಿರುವ ಗೋಕಾಕರು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳೆರಡರಲ್ಲೂ ಅತ್ಯುತ್ಕೃಷ್ಟವಾದ ಸಾಹಿತ್ಯ ರಚನೆ ಮಾಡಿದ್ದಾರೆ. ಕಾವ್ಯ, ನಾಟಕ, ಕಾದಂಬರಿ, ವಿಮರ್ಶೆ, ಪ್ರವಾಸಕಥನ, ಜೀವನ ಚರಿತ್ರೆ ಮೊದಲಾದ ಪ್ರಕಾರಗಳಲ್ಲಿ ಕೃಷಿ ಮಾಡಿ ಹೆಸರುವಾಸಿಯಾಗಿದ್ದಾರೆ. ಕರ್ನಾಟಕದಲ್ಲಿ ಕನ್ನಡಕ್ಕೆ ವಿಶೇಷವಾದ ಸ್ಥಾನಮಾನಗಳು ಸಿಗಬೇಕೆಂದು ನೀಡಿದ ಗೋಕಾಕ ವರದಿ ಅವರ ಹೆಸರನ್ನು ಸ್ಥಾಯಿಗೊಳಿಸಿದೆ. ಇವರ 'ಭಾರತ ಸಿಂಧು ರಶ್ಮಿ' ಕನ್ನಡ ಸಾಹಿತ್ಯವಷ್ಟೇ ಅಲ್ಲ ಭಾರತೀಯ ಸಾಹಿತ್ಯದಲ್ಲೂ ಅಪರೂಪದ ಕೃತಿಯಾಗಿದೆ.

### ಕೃತಿಯನ್ನು ಕುರಿತು

ಈ ಮಹಾಕಾವ್ಯವು ಭಾರತ ರಾಷ್ಟ್ರದ ನಿರ್ಮಾಣ ಅದರ ಐಕ್ಯ, ಆರ್ಯ ಮತ್ತು ದ್ರಾವಿಡರ ಸಂಸ್ಕೃತಿಗಳ ಸಮನ್ವಯ, ಧರ್ಮ ನಿರಪೇಕ್ಷತೆ ಮತ್ತು ಆಧ್ಯಾತ್ಮಿಕ ರಂಗದಲ್ಲಿ ಮಾನವನು ಪಡೆಯುವ, ಪಡೆಯಬಹುದಾದ ಸಾಧ್ಯತೆಗಳ ಬಗ್ಗೆ ರೂಪುಗೊಂಡಿದೆ. ವಿನಾಯಕರೇ ಹೀಗೆನ್ನುತ್ತಾರೆ. ವ್ಯಕ್ತಿವಿಕಸನದ ಚಿರಂತನ ಕತೆ ಹಾಗೂ ಮನುಕುಲದ ಹೃದಯಾಂತರದಲ್ಲಿ ನಡೆದ ಒಳಿತು ಕೆಡುಕಿನ ಚಿರಂತನ ಸಂಗ್ರಾಮ ಹಾಗೂ ಒಳಿತಿನ ಕೊನೆಯ ಜಯವನ್ನು ಸಾರುತ್ತದೆ.

ಪಿ. ಲಂಕೇಶ್‌ರು ಹೇಳುವಂತೆ ಹಿಂದೂ ಧರ್ಮವೆಂಬುದು ಪ್ರಕೃತಿಗೆ, ನಿಸರ್ಗಕ್ಕೆ ಮತ್ತು ವಾಸ್ತವಕ್ಕೆ ಹತ್ತಿರವಿದ್ದಾಗ ರಾಮಾಯಣ – ಮಹಾಭಾರತಗಳು ಹುಟ್ಟಿದವು. ಭಾರತದ ಮನುಷ್ಯ ಆಗ ಘನತೆ, ಆತ್ಮವಿಶ್ವಾಸದಿಂದ, ಸಮಾನತೆ, ಪ್ರೀತಿಯ ಸಹಭಾಗಿಯಾಗಿದ್ದ, ಆಮೇಲೆ ಬಂದ ರಾಜಾಧಿರಾಜರುಗಳು ಮತ್ತು ಪುರೋಹಿತರು ಕಟ್ಟಿದ ವರ್ಣಾಶ್ರಮ ಪಂಜರ ಆತನ ಚೈತನ್ಯವನ್ನು ಕುಗ್ಗಿಸಿತು. ಗೋಕಾಕರು ಕೂಡ ವೇದಕಾಲೀನ ಮೌಲ್ಯವನ್ನು ಎತ್ತಿ ಹೇಳುವಲ್ಲಿ ಆಯ್ದುಕೊಂಡ ಮಹಾಕಾವ್ಯವೇ ಭಾರತ ಸಿಂಧು ರಶ್ಮಿ.

ದುಷ್ಯಂತ – ಶಕುಂತಲೆಯರ ಮಗ ಭರತನಿಂದ ಭಾರತ ಎಂಬ ಹೆಸರು ಬಂದಿದೆ ಎನ್ನಲಾಗುತ್ತಿತ್ತು. ಆದರೆ ಸುದಾಸನಿಂದ ಭಾರತ ಎಂದಾಗಿದೆ ಎಂಬುದು ಕಾವ್ಯದಲ್ಲಿ ಒಡಮೂಡಿದೆ. ಭಾರತ ಸಿಂದು ರಶ್ಮಿ ಶೀರ್ಷಿಕೆಯ ವಿಚಾರವಾಗಿ ಗೋಕಾಕರು 1979ರ ಆಗಸ್ಟ್ ತಿಂಗಳ ಸಂಚಿಕೆ ಪ್ರಜಾಮತದಲ್ಲಿ ಹೀಗೆ ಹೇಳಿದ್ದಾರೆ.

ಈ ಶೀರ್ಷಿಕೆಯಲ್ಲಿ ಒಂದು ಅರ್ಥವನ್ನು ಧ್ವನಿಸಿದ್ದೇನೆ. ಋಗ್ವೇದದಲ್ಲಿ ಬರುವ ಸುದಾಸನು ದಾಸಕುಲದ ಒಬ್ಬ ಚಕ್ರವರ್ತಿ, ಅವನೇ ಭರತ ಅವನು ಸಂಘಟಿಸಿದ ರಾಜ್ಯ ಭರತವರ್ಷವಾಯ್ತು, ಹೀಗಾಗಿ ಭಾರತ ಪದಕ್ಕೆ ವಿಶಿಷ್ಟವಾದ ಅರ್ಥವಿದೆ. ಸಿಂಧು ಎನ್ನುವುದು ಅಸ್ತಿತ್ವದ ಒಂದು ಸೆಳವು. ರಶ್ಮಿ ಪ್ರಜ್ಞೆಯ ಒಂದು ಕಿರಣ, ಈ ರಶ್ಮಿ ಸಿಂಧುವಿನಲ್ಲಿ ಲೀನವಾಗಬೇಕು, ಇಲ್ಲದಿದ್ದರೆ ಮನುಷ್ಯನ ವೇದಾಂತ ಹಾಗೂ ವ್ಯವಹಾರಗಳು ಬೇರ್ಪಡುತ್ತವೆ. ಅಂದರೆ ಪ್ರಜ್ಞೆಯೆನ್ನುವುದು ಅಸ್ಥಿತ್ವದಲ್ಲಿ ಸಮಾವಿಷ್ಟವಾದಾಗ ಮನುಷ್ಯ ಜೀವನ ಪೂರ್ಣವಾಗುತ್ತದೆ.

ಈ ಹಿನ್ನಲೆಯಲ್ಲಿ ಭಾರತ ಸಿಂಧು ರಶ್ಮಿ ಮಹಾಕಾವ್ಯ ವಿಶಿಷ್ಟವೂ, ವಿನೂತನವು ಆಗಿರುವ ಬೃಹತ್ಕಾವ್ಯ, ಮಹಾತ್ಕಾವ್ಯವೂ ಹೌದು, ದಾರ್ಶನಿಕ ಕಾವ್ಯವೂ ಹೌದು. ಹನ್ನೆರಡು ಕಾಂಡಗಳಲ್ಲಿ ವಿಸ್ತರಿಸಿಕೊಂಡ ಮೂವತ್ತೈದು ಸಾವಿರ ಸಾಲುಗಳು ಸರಳ ರಗಳೆಗೆ ಒಳಪಟ್ಟು ಎರಡು ಸಂಪುಟಗಳಲ್ಲಿ ಹರಡಿಕೊಂಡಿವೆ, ಇನ್ನೂರಕ್ಕೂ ಹೆಚ್ಚು ಪಾತ್ರಗಳಿರುವ ಈ ಕಾವ್ಯದಲ್ಲಿ ವಿಶ್ವಾಮಿತ್ರ ಪ್ರಧಾನ ಪಾತ್ರವಾಗಿದ್ದಾನೆ.

### ಪೀಠಿಕಾ ಸಂಧಿ

ಪೀಠಿಕಾ ಸಂಧಿಯಲ್ಲಿ ಕವಿ ಕಾವ್ಯರಚನೆಯ ಸಿದ್ಧತೆ, ಕಾಲ, ಗೊತ್ತುಗುರಿ, ಸ್ವರೂಪ, ಭಾಷೆಗಳ ಬಗ್ಗೆ ವಿವರಿಸುತ್ತಾರೆ. 'ಏಳು ವರ್ಷದ ಕಾವ್ಯಸಮಾಧಿಗಿಹುದು ರಜೆ, ಸಮಾಧಿ ಇಲ್ಲದಿಹ ಬಾಳು ಸಜೆ, ಮತ್ತೇನು?[1] ಎಂದು ಹೇಳುವ ಮೂಲಕ ಕಾವ್ಯ ರಚನೆಗೆ ತೆಗೆದುಕೊಂಡ ಅವಧಿ ಏಳು ವರ್ಷಗಳು ಎಂದು ಸೂಚಿಸುತ್ತಾರೆ.

ಐತಿಹ್ಯ, ಕಲ್ಪನಾರಮೆಯ ರಸವೀಡಾಗಿ
ಸರಸತಿಯ ಹಾಡಾಗಿ, ಮಹೇಶ್ವರಿಯ ನಾಡಾಗಿ
ಮಹಾಕಾಳಿಯ ಕಹಳೆ ಮೆರೆಯುತಿಹುದೀ ಕಾವ್ಯ
ಎನ್ನುವ ಕವಿ ಪೌರತ್ಯ ಪಾಶ್ಚಾತ್ಯ ಮಹಾಕವಿಗಳನ್ನು ನನೆಯುತ್ತೆ[2]

ಇದು ನನ್ನ ಕೃತಿಯಲ್ಲಿ, ಕನ್ನಡ ಜನಮನ ಕೃತಿ
ಕನ್ನಡದ ಬನಶಂಕರಿಯ ಪದಪದ್ಮವರ್ಜಿಸುವ
ಅರ್ಪಿಸಿದ ಅರಿಶಿನ – ಕುಂಕುಮ ಹುಡಿಯಿದು[3]

ಎಂಬ ವಿನಯವಂತಿಕೆಯನ್ನು ತೋರಿಸುತ್ತಾರೆ. ಭಾಷೆ, ರೂಪ, ತಾಳ, ಅರ್ಥಾಂತರಗಳು ಪ್ರತಿಮತ್ವ, ಶೈಲಿ, ಭಾವ, ರಸ, ಧ್ವನಿ, ಈ ಹತ್ತು ಕಾವ್ಯದ ದಶಾಂಗಳು ಇವು ಕಾವ್ಯದಲ್ಲಿ ಸಾಧಿಸಲ್ಪಟ್ಟಿವೆ.

ತಮ್ಮ ಕಾವ್ಯದ ಭಾಷೆಯನ್ನು ಕುರಿತು ಕವಿ
ಅಲ್ಲ ಹಳಗನ್ನಡವು ; ಅಲ್ಲಿ ನಡುಗನ್ನಡವು
ಸಂಸ್ಕೃತ ವಿಕೃತ ಕನ್ನಡವಲ್ಲ ; ವಿಕಲಾಂಗ ಭಂಗೀಬೂತ
ಆಂಗ್ಲಗನ್ನಡವಲ್ಲ ; ಉಪಪ್ರಾಂತ ಕನ್ನಡವಲ್ಲ
ಬಳಕೆಗನ್ನಡವಲ್ಲ; ಮೊಳಕೆಗನ್ನಡವಲ್ಲ
ಹುಳುಕುಗನ್ನಡವಲ್ಲ ; ಹಳಕುಗನ್ನಡವಲ್ಲ
ಅಚ್ಚಗನ್ನಡವಲ್ಲ ; ಹುಚ್ಚುಗನ್ನಡವಲ್ಲ

ಮೆಚ್ಚುಗನ್ನಡದಲ್ಲಿ ನಾ ಒರದನೀ ಕೃತಿಯ[4] ಎಂದು
ಮೆಚ್ಚುಗನ್ನಡದಲ್ಲಿ ಕಾವ್ಯರಚಿಸಿರುವುದಾಗಿ ಹೇಳುತ್ತಾರೆ
ಕಾವ್ಯ ವಸ್ತುವನ್ನು ಕುರಿತು ಕವಿ
ಜನಾಂಗಗಳೆರಡು ಆರ್ಯ – ದಸ್ಯುಗಳೆಂದು
ಸಂಗ್ರಾಮಿಸುತ ಮುಂದೆ ಸಂಗಮಿಸಿರುವ ಕೈವಾಡ ಪವಾಡದ ಕಥನವಿದು. ಎಂದು ವೇದಕಾಲೀನ ಇತಿಹಾಸವನ್ನು ಬಿತ್ತರಿಸುವುದಾಗಿ ಹೇಳುತ್ತಾರೆ.

ಭಾರತ ಇತಿಹಾಸವನ್ನು ಹೇಳುವ ಭಾರತ ಸಿಂಧು ರಶ್ಮಿ ಕಾವ್ಯದ ಮುಖ್ಯ ತಿರುಳು ವಿಶ್ವಾಮಿತ್ರನ ಕತೆಯೇ ಆಗಿದೆ. ಎಂಬುದನ್ನು..

ಪೌರವ – ಭಾರತ ಕುಲದ ರಾಜನ್ಯ, ವಿಶ್ವರದ
ಸಮಷ್ಟಿಯ ಶಿಲ್ಪಿ, ಯುಗಪ್ರವರ್ತಕ ಪುರುಷ
ಗಾಯತ್ರಿ ಮಂತದ್ರಷ್ಟಾರ, ವಿಶ್ವಾಮಿತ್ರ
ಎಂದು ಪಡೆಯುತ ಬ್ರಹ್ಮಪದವಿಯ, ವಿಕಾರವಶ
ಸೃಷ್ಟಿಯ ಸೃಜಿಸಿ ತ್ಯಜಿಸಿದನು. ಅನ್ಯಾದೃಸ ಮಂತ್ರ
ಸೃಷ್ಟಿಸಾಮ್ರಾಜ್ಯನವ ಪೋಷಿಸುವುದೀ ಕೃತಿಯು[5] ಎಂದು
ಕವಿಯೇ ಸೃಷ್ಟಿ ಪಡಿಸುತ್ತಾರೆ.

**ಪೂರ್ವಾಪರ ಕಾಂಡ**

ಮೊದಲ ಕಾಂಡವಾದ ಪೂರ್ವಾಪರ ಕಾಂಡದಲ್ಲಿ ಆದಿಮಾನವನಾದ ಸ್ವಾಯಂಭುವ ಮನುವಿನಿಂದ ಮೊದಲ್ಗೊಂಡು ಆದಿಮಾನವ ಅನ್ನ ಸಮಸ್ಯೆ, ಮೈಥುನದ ಸಮಸ್ಯೆ ಹಾಗೂ ಧರ್ಮಸಮಸ್ಯೆಗಳ ಕುರಿತು, ಆ ಮೂಲಕ ಆದಿಮಾನವ, ಆದಿಮ ಸಮಾಜದ ವಿಕಾಸ ಕ್ರಮವನ್ನು ನಿರೂಪಿಸಲಾಗಿದೆ.

**ವಿಶ್ವರಥನ ಪರ್ಯಟನೆ:** ಪೂರ್ವಾಪರ ಕಾಂಡದ ಮೊದಲನೇ ಸಂಧಿ ಶರ್ಯಣಾವತ್ ಸಮುದ್ರ ಇದು ವಿಶ್ವರಥನ ಪ್ರಪಂಚ ಪರ್ಯಪಟನೆಯ ವರ್ಣನೆಯಿಂದ ಕೂಡಿದೆ. ಕಾವ್ಯದ ಮಧ್ಯದಲ್ಲಿ ಬರುವ ವಿಶ್ವರಥನ ಪ್ರಪಂಚ ಪರ್ಯಟನೆಯಿಂದಲೇ ಕಾವ್ಯವನ್ನು ಆರಂಭಿಸಿರುವುದು ವಿಶಿಷ್ಟವಾಗಿದೆ.

ಖ್ಯಾತಿವೆತ್ತಿಹುದಿಂದು ಭೂನಂದನವೆಂದು
ಕಾಶ್ಮೀರ, ಪರ್ವತಶ್ರೇಣಿಗಳ ಮಧ್ಯದಲಿ
ವೇದಕಲಾದೊಳಿತ್ತು ದ್ರೋಣಿಯಿದು ಸಿರಿಗಡಲು
ಶರ್ಯಣಾವತ್ತೆಂಬ ಹೆಸರಾಂತು, ಸುತ್ತುವರಿದಿರಲು
ಪರ್ವತಗಳೀ ನೀರಿನೈಸಿರಿಗಳನು
ಕಮರಿಯೊಂದರ ಕೆಳಗೆ ಪರ್ವತರಂಧ್ರದೊಳಗಿಂದ
ಹರಿದ ನೀರು, ವಿತಸ್ತೆಯಂಬ ನದಿ ಮರುದ್‌ವಧೆಯ
ಪಾತ್ರವನು ಸೇರಿತ್ತು, ಇದ್ದೊಂದು ರಂಧ್ರವನು
ಇಂದ್ರ ತಿವಿದರೆ ತನ್ನ ವಜ್ರಾಯುಧದಿಂದ
ರಂಧ್ರವಾಯಿತು ಹಿರಿಯ ಹೊದರು, ಪೊಳ್ಳು, ಕೊನ್ನಾರ
ಹರಿದು ಹೋಗಲು ನೀರು ಶರ್ಯಣಾವತ್ ಕಡಲು
ಕಳೆದು ಕೊಂಡಿತು ತನ್ನ ಗಾತ್ರವನು ; ಒಂದೆರಡು
ಕೊಳಗಳುಳಿದವು ; ಕಥಿಸಿಹವು ಸ್ಥಳ ಪುರಾಣಗಳು,
ನೆಲ ಗುಡುಗೆ ಭೂಕಂಪ, ಸಿಡಿಲೆ ವಜ್ರಾಯುಧ
ವಿಶ್ವರಥನೈತಂದ ಸಮಯ ಕೇಳಿರಲಿಲ್ಲ
ನೆಲಗುಡುಗು, ಕಂಡಿರಲಿಲ್ಲ ಸಿಡಿಲಿಗಳುನಾಹುತವು[6]

ಪ್ರಸ್ತುತತೆ ಮತ್ತು ವೇದಕಾಲಿನ ಇತಿಹಾಸಗಳೆರಡನ್ನು ಒಟ್ಟಿಗೆ ಕಟ್ಟಿರುವ ಕವಿಯ ಜಾಣ್ಮೆ ಆರಂಭದ ಈ ಸಾಲುಗಳಲ್ಲಿಯೇ ತಿಳಿಯುತ್ತದೆ. ಇಂದು ಕಾಶ್ಮೀರ ಎನಿಸಿಕೊಂಡಿರುವ ಜಾಗದಲ್ಲಿಯೇ ವೇದಕಾಲದಲ್ಲಿ ಶರ್ಯಾಣಾವತ್ ಕಡಲಿತ್ತು. ಅಲ್ಲಿಗೆ ವಿಶ್ವರಥ ಬಂದಿದ್ದ, ಆದರೆ ಭೂಕಂಪ, ಸಿಡಿಲಿನಂತಹ ಪ್ರಕೃತಿ ವಿಕೋಪಗಳಿಂದ ಆ ಕಡಲು ಇಲ್ಲವಾಗಿ ಕೆಲವು ಕೊಳಗಳಾಗಿ ಉಳಿದವು. ಇದು ಇಂದ್ರನ ವಜ್ರಾಯುಧದಿಂದ ಆದದ್ದು ಎಂಬಿತ್ಯಾದಿ ಸ್ಥಳಪುರಾಣಗಳು ಹುಟ್ಟಿಕೊಂಡವು ಎಂಬುದನ್ನು ಕವಿ ಸೃಷ್ಟಿಪಡಿಸಿ ನಂತರ ವಿಶ್ವರಥ ಬಂದಾಗಿನ ಪ್ರಕೃತಿ ವರ್ಣನೆಯನ್ನು ಮಾಡುವ ನೆಪದಲ್ಲಿ ಸುಂದರ ವರ್ಣನೆಯನ್ನು ಮಾಡುತ್ತಾರೆ.

**ಸ್ವಾಯಂಭುವ ಮನು.:** ಈತ ಮನುಕುಲದ ಮೊದಲ ಮಾನವ. ಬ್ರಹ್ಮನು ಸೃಷ್ಟಿಕಾರ್ಯವನ್ನು ಆರಂಭಿಸುತ್ತಾನೆ. ಬ್ರಹ್ಮನ ಮಾನಸ ಪುತ್ರರು, ಸಪ್ತರ್ಷಿಗಳ ಹುಟ್ಟಿನ ನಂತರ.

ಆಗ ಬ್ರಹ್ಮಶರೀರಬಿಂಬ ದೊಳಗಿಂದದೂ
ಪ್ರತಿಬಿಂಬ ದೇಹದೊಲು ಡಿಂಭದೊಲು ಹೊರಬಂದು
ಕಣ್ಣೆ ಬಿತ್ತೊಂದು ಮೈ ಜೋಡಿಮೈ ಎಂವೊಲು
ಉಭಯ ಲಿಂಗಿಯೋ ಏನೋ! ಬಂದಿರುವದರಡಾಯ್ತು
ಸ್ತ್ರೀಪುರುಷರೂಪಗಳ ಮಿಥುನ ಕಣ್ ಕೋರಯಿಸಿ
ಸ್ವಾಯಂಭೂ ಮನುವೆಂಬ ನಾಮದ ಸ್ಪುರಣೆಯಾಯ್ತು
ಪುರುಷ ರೂಪಕೆ ಮಡದಿಯಾದಳಾ ಸ್ತ್ರೀರೂಪೆ
ಅಂತು ಶತರೂಪಯೆಂಬಭಾದಾನ, ಪ್ರಪ್ರಥಮ ದಂಪತಿಗಳಿವರು
ಮಾತಾಪಿತರು ಮನುಕುಲಕೆ[7]

ಸಂತಾನಾಭಿವೃದ್ಧಿಗಾಗಿ ರೂಪಿಸಿದ ಇವರಿಬ್ಬರನ್ನು ಬ್ರಹ್ಮ ಹರಿಸಿದ, ಕಾಡುಮೇಡುಗಳನ್ನು ಸುತ್ತಿದರು, ಇಬ್ಬರ ನಡುವೆ ಕಾಮಪ್ರೇಮಗಳು ಉದಯಿಸಿದವು. ಬೆತ್ತಲಾಗಿದ್ದ ಅವರಿಗೆ ಮೈ ಮುಚ್ಚಿಕೊಳ್ಳಬೇಕೆಂಬ ಪ್ರಜ್ಞೆ ಹುಟ್ಟಿತು. ಬಾಳೆಲೆಯಿಂದ ತಮ್ಮ ಮೈಮುಚ್ಚಿಕೊಳ್ಳಲಾರಂಭಿಸಿದರು. ಪಂಚಗೌರಿ ಸೀಮೆಯಲ್ಲಿದ್ದ ಅವರು ತಮ್ಮ ಹುಡುಕಾಟದಿಂದ ಬದುಕಿನ ವಿಧಾನಗಳನ್ನು ಕಂಡುಕೊಂಡರು. ಗೋವಿನ ಹಾಲಿನ ರುಚಿ, ಹಣ್ಣು – ಹಂಪಲುಗಳ ಸಂಗ್ರಹ ಇತ್ಯಾದಿಗಳನ್ನು ಸಂಶೋಧಿಸಿಕೊಳ್ಳುತ್ತಲೇ ಸಾಗಿದರು, ಈ ನಡುವೆ ಅವರಿಗೆ ಪ್ರತಿವೃತನೆಂಬ ಮಗ ಹುಟ್ಟಿದನು. ಸಪ್ತರ್ಷಿಗಳು ಬಂದು ಅವನಿಗೆ ಹರಸಿದರು, ವಿದ್ಯಾಭ್ಯಾಸವನ್ನು ಮಾಡಿಸಿದರು. ಬಾಲಕ ಪ್ರಿಯವೃತ ಕಲ್ಲುಗಳೊಡನೆ ಆಡುತ್ತಿರಲು ಕಿಡಿಯೊಂದು ಹೊಮ್ಮಿ ಅಗ್ನಿಯ ಪರಿಚಯವಾಯಿತು. ಅಂಗಿರಸ ಮತ್ತಿತ್ತರ ಸಪ್ತರ್ಷಿಗಳು ಅಗ್ನಿಯ ಮಹತ್ವನ್ನು ತಿಳಿಸಿ, ಹೋಮಕುಂಡವನ್ನು ಸ್ಥಾಪಿಸಿ ನಿತ್ಯ ಅಗ್ನಿ ಇರುವಂತೆ ಮಾಡಿದರು. ಸೋಮರಸದ ಮಹತ್ವವನ್ನು ಅರಿತರು.

ಸ್ವಾಯಂಭು ಮನು ಕಾಡು ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ಬಯಸಿ ಪೊಟರೆಯೊಂದರಲ್ಲಿ ಕುಟುಂಬವನ್ನು ಸ್ಥಾಪಿಸಿದ. ಹೀಗೆ ಕುಟುಂಬ, ನೆಲಗಳು ರೂಪುಗೊಂಡವು. ಅಷ್ಟರಲ್ಲಿ ಪ್ರಿಯವುತ ಯುವಕನಾದ ಸ್ವಯಂಭು ಮನು ಮತ್ತು ಶತರೂಪೆಯರಿಗೆ ಮಗನ ಜೊತೆಗಾತಿಗಾಗಿ ಯೋಚನೆ ಆರಂಭವಾಯಿತು. ಸಪ್ತರ್ಷಿಗಳು ಅದಕ್ಕಾಗಿ ಯಜ್ಞಯಾಗಾದಿಗಳನ್ನು ಮಾಡಿಸಿದರು. ಅದರಿಂದ ದೊರೆತ ಪಾಯಸವನ್ನು ಎಂಟು ದಿಕ್ಕುಗಳಿಗೆ ಏಕೋಹಂ ಬಹುಸ್ಯಾಮಿ ಎಂದು ಪಠಿಸುತ್ತಾ ಅರ್ಪಿಸಲು ಎಂಟು ದಿಕ್ಕುಗಳಿಂದಲೂ ಹೆಣ್ಣು ಗಂಡುಗಳ ದಂಡು ಆಗಮಿಸಿತು, ಸ್ವಯಂಭು ಮಗನ ಮದುವೆ ನೆರವೇರಿಸಿದ ಸಪ್ತರ್ಷಿಗಳಿಗೆ ಹೆಣ್ಣು ಮಕ್ಕಳನ್ನು ಧಾರೆಯೆರೆದ ಹಲವು ಮದುವೆಗಳ ನೆರವೇರಿಸಲು ನಂದನವಾಯಿತು. ಪಂಚಗೌರಿಸೀಮೆ, ಕಾಲಾನಂತರ ಜನ ಸೋಮಾರಿಗಳಾಗಿ ರಾಷ್ಟ್ರ ತನ್ನ ಶೋಭೆಯನ್ನು ಕಳೆದುಕೊಳ್ಳತೊಡಗಿತು. ರಾಜ ಜನರಿಗೆ ದುಡಿಮೆಯನ್ನು ಕಡ್ಡಾಯಗೊಳಿಸಿದ, ಜನರಿಗೆ ಆಸಕ್ತಿಯಿರುವ ಅವರವರಿಗೆ ಉಚಿತವಾದ ಉದ್ಯೋಗಗಳನ್ನು ಆಯ್ದುಕೊಂಡು ಮಾಡುವ ಅವಕಾಶ ನೀಡಿದೆ.

ಗುಣಗಣನೆಯಿಂದಾಯ್ತು ಚತುರ್‌ವರ್ಣವ್ಯವಸ್ಥೇ
ಬೆನ್ನು ಕಟ್ಟಿತು ತನ್ನ ಹುಟ್ಟಿಂದೆಸೆಯಲಿಲ್ಲ
ವ್ಯಕ್ತಿಯಾಗುತ ಬ್ರಹ್ಮವಿದ್ದ, ಕ್ಷತ್ರಿಯ, ವೈಶ್ಯ
ಶೂದ್ರರ ಮಕ್ಕಳೆದ್ದಿಹರು ಮೇಲಿನ ವರ್ಗಗಳ ಹೊಕ್ಕು
ಮೇಲಿನವರಿಳಿದಹರು, ಕ್ಷತ್ರಿಯ, ವೈಶ್ಯ, ಬ್ರಹ್ಮವಿದ
ಗುಣವಿಲ್ಲದಲೆ, ಶೂದ್ರ ಪಂಥಲಿಕೆಯ ತುಳಿದು
ಸ್ವಭಾವ – ಸ್ವಗುಣದಂತಿರಲು ವರ್ಗೀಕರಣ
ಮೇಲು ಕೀಳೆಂಬ ಭಾವನೆಯಿರದೆ ಬಾಳಿದರು
ವ್ಯಕ್ತಿ ಸಮುದಾಯದಲಿ, ವೇದಕಾಲಾವಧಿಯ[8]

ಕೊನೆ ಕೊನೆಗೆ ಮುಗಿದಿರಲು ವೇದಕಾಲ ಸಮಾಜ ವಿಭವಗಳು ಲಯವಾಗಿ ವಿವರ್ಣಗೊಳಿಸಿದವು. ಪ್ರಪ್ರಥಮ ಮಾನವನಾಗಿ ಹೀಗೆ ಬಾಳಿದನು. ಸ್ವಯಂಭು ಆತನ ಅಂತ್ಯವಾದಾಗ ಎಲ್ಲರೂ ಆತನ ಅಂತ್ಯಸಂಸ್ಕಾರ ಹೇಗೆ ಮಾಡಬೇಕೆಂದು ಯೋಚಿಸುತ್ತಾ.. ಈಜಿಪ್ಟಿನವರಂತೆ ಪಿರಮಿಡ್‌ಗಳಲ್ಲಿ ಇಡುವುದೇ, ಸ್ವೀಡನ್ನರಂತೆ ದೋಣಿಯಲ್ಲಿ ತೇಲಿಸಿ ಸುಡುವುದೇ, ಗ್ರೀಕರಂತೆ ಮಾಡುವೇ ಎಂದೆಲ್ಲ ಚಿಂತಿಸಿ ಕೊನೆಗೆ ಅಗ್ನಿಸ್ಪರ್ಶವನ್ನು ಮಾಡುತ್ತಾರೆ. ಆಕೂತಿಯ ಕುವರ ಸ್ವಾರೋಚಿಕ್ಷನನ್ನು ದ್ವಿತೀಯ ಮನುವೆದು ಘೋಷಿಸುತ್ತಾರೆ.

ಈ ಸಂಧಿಯಲ್ಲಿ ಸ್ವಯಂಭು ಮನು ಮತ್ತು ಶಕರೂಪೆಯರು ಒಂದೇ ದೇಹವಾಗಿದ್ದವರು ಎನ್ನುವ ಮೂಲಕ ಸ್ತ್ರೀ ಪುರುಷರ ಶ್ರೇಣೀಕರಣವನ್ನು ತೊಡೆದಿದ್ದಾರೆ. ಮನುಷ್ಯನ ಸಂಶೋಧನಾ ಬುದ್ಧಿ ಹೇಗೆ ಆತನನ್ನು ನಾಗರೀಕತೆಯ ಕಡೆಗೆ ಕರೆತಂದಿತು ಎನ್ನುವುದರ ವಿವರಣೆ ಇದೆ. ಅದೇ ನಾಗರೀಕ ಬುದ್ಧಿ ಬೆಳೆದಂತೆಲ್ಲ ಮನುಷ್ಯರ ನಡುವೆ ಶ್ರೇಣಿಕರಣ ಆರಂಭವಾದುದರ ಸೂಚನೆಯನ್ನು ನೀಡುತ್ತಾರೆ. ಸ್ವಯಂಭೂ ಮನುವಿನ ಅಂತ್ಯದಲ್ಲಿ ಈಜಿಪ್ಟರು, ಸ್ವೀಡನ್ನರ ಗ್ರೀಕರ ಬಗೆಗೆ ಬರುವ ಮಾತುಗಳು ಮನು ಮೊದಲ ಮಾನವ ಎನ್ನುವ ಕವಿ ಇತರ ದೊರೆಗಳು ಈಗಾಗಲೇ ಆಗಿ ಹೋಗಿರುವುದನ್ನ ಸೂಚಿಸುವುದು ಅಸಂಬದ್ಧ ಎನಿಸುತ್ತದೆ.

**ಆದಮಿನ ಅನ್ನ ಸಮಸ್ಯೆ:–** ದ್ವಿತೀಯ ಮನು ಸ್ವಾರೋಚಿಕ್ಷನ ಕಾಲದಲ್ಲಿ ಪಂಚಗೌರಿ ಸೀಮೆಯಲ್ಲಿ ಹಾಲು ಫಲಗಳ ಸವಿದು ಬದುಕಿರುವ ಜನ, ಶರ್ಯಾಣವತ್ ಸಮುದ್ರದ ತೀರದಲ್ಲಿ ಬಗೆ ಬಗೆಯ ಹಿಟ್ಟುಗಳ ರಾಶಿ ರಾಶಿ ಬಿದ್ದಿರುವುದನ್ನು, ಮುತ್ತು ರತ್ನ ಹವಳಗಳ ರಾಶಿಗಳನ್ನು ಕಂಡರು. ವರುಣ ದೇವತೆ ಜನರಿಗೆ ದಿನಕ್ಕೆಷ್ಟೋ ಅಷ್ಟನ್ನು ಮಾತ್ರ ಇಲ್ಲಿಂದ ತೆಗೆದುಕೊಂಡು ಹೋಗಬೇಕು ಅತಿಯಾಸೆಯಿಂದ ಹೆಚ್ಚಾಗಿ ತೆಗೆದುಕೊಂಡು ಹೋದರೆ, ಮರುದಿನವೇ ಈ ಹಿಟ್ಟೆಲ್ಲ ಮರಳಾಗುತ್ತದೆ ಎಂಬ ಎಚ್ಚರಿಕೆಯನ್ನು ನೀಡಿದ.

ಅದಿಮ – ಆದಿಮೆಯರ ಜೋಡಿಯು ಆ ತೀರದಲ್ಲಿದ್ದರು. ಕೆಲದಿನಗಳ ನಂತರ ಆದಿಮೆ ಪ್ರತಿದಿನ ಸಮುದ್ರತೀರಕ್ಕೆ ಹೋಗುವವರು ಯಾರೂ ವರುಣನಿಗೆ ಗೊತ್ತಿಲ್ಲದಂತೆ ಒಟ್ಟಿಗೆ ತಂದಿಟ್ಟುಕೊಂಡರೆ ಆಯಿತು ಎಂದು, ಆದಿಮನೊಡನೆ ವಾದ ಮಾಡಿದಳು. ಆತ ಒಪ್ಪದೇ ಇದ್ದಾಗ ತನ್ನ ಮಕ್ಕಳನ್ನು ಒಪ್ಪಿಸಿ ರಾತ್ರಿಹಿಟ್ಟನ್ನು ಚೀಲದಲ್ಲಿ ತಂಬಿಸಿಕೊಂಡು ಬಂದಳು. ಬೆಳಗಾದಾಗ ಚೀಲದಲ್ಲಿದ್ದ ಹಿಟ್ಟು ಸಮುದ್ರ ತೀರ ಹಿಟ್ಟೆಲ್ಲ ಮರಳಾಗಿತ್ತು. ಜನ ಯಾರಿಂದ ಹೀಗಾಯ್ತು ಎಂದು ತಿಳಿಯದೇ ಬೈದರು, ಪರಿತಪಿಸಿದರು, ಆದಿಮ ಮತ್ತೆ ಆಹಾರವನ್ನು ಅರಸತೊಡಗಿದ, ಹಿಟ್ಟಿದ್ದ ಜಾಗದಲ್ಲಿ ಸಿಕ್ಕ ಕಾಳುಗಳನ್ನು ಬಿತ್ತಿದ, ಅಲ್ಲಿಂದ ವ್ಯವಸಾಯವನ್ನು ಕಂಡುಕೊಂಡುರು ಆದಿಮ ಮನುಕುಲದ ಮೊದಲ ಕೃಷಿಕನಾದ.

ಈ ಸಂಧಿಯಲ್ಲಿ ಕವಿ ಮನುಷ್ಯ ಎದುರಿಸಿದ ಆಹಾರ ಸಮಸ್ಯೆಯನ್ನು ವಿವರಿಸಿದ್ದಾರೆ. ಹೆಣ್ಣಿನ ಅತಿಯಾಸೆಯ ಬುದ್ಧಿ, ಸಂಗ್ರಹ ಬುದ್ದಿಯಿಂದಾಗಿ ಮನುಷ್ಯರು ತಮಗೊದಗಿದ ಸವಲತ್ತುಗಳನ್ನು ಕಳೆದುಕೊಳ್ಳುವಂತಾಯಿತು. ಅದೇ ಮುಂದಿನ ಬೆಳವಣಿಗೆಗೆ ಕಾರಣವೂ ಆಯ್ತು ಎಂಬುದನ್ನು ಸೂಚಿಸುತ್ತಾರೆ. ಪರಂಪರಾಗತವಾದ ಹೆಣ್ಣು ಆಸೆಬುರುಕಿ ಎಂಬ ಭಾವವನ್ನು ಕವಿಯೂ ಹೊಂದಿರುವುದು ಸ್ಪಷ್ಟವಾಗಿದೆ.

**ಯಮ – ಯಮರ ಅಗ್ನಿದವ್ಯ:** ಈ ಸಂಧಿಯಲ್ಲಿ ರಾಜ್ಯಗಳ ವಿಸ್ತರಣೆ, ಆರ್ಯರ ಆಗಮನ, ಮಾನವರ ಕಾಮದ ಸಮಸ್ಯೆಗಳನ್ನು ವಿವರಿಸಲಾಗಿದೆ. ಉತ್ತಮನ ಮನ್ವಂತರ ಕಾಲಕ್ಕಾಗಲೇ ಆರ್ಯರ ಆಗಮನವಾಗಿತ್ತು. ಗ್ರಾಮ, ಪಟ್ಟಣ, ಕೋಟೆ – ಕೊತ್ತೊಲಗಳ ರಚನೆ ಆರಂಭವಾಗಿತ್ತು. ನೂಲುವುದು, ನೇಯುವುದು ಮುಂತಾದ ವೃತ್ತಿಗಳು ರೂಪುಗೊಂಡಿದ್ದವು.

ವಿವಸ್ವತನು ತನ್ನ ಪತ್ನಿ ಅಶ್ವರೂಪದಲ್ಲಿದ್ದ ಸರಣ್ಯೂ ದೇವಿಯಲ್ಲಿ ಅಶ್ವರೂಪನಾಗಿ ಸೇರಿದನು. ಅವರಿಗೆ ಯಮಯಮಿ ಎಂಬ ಅವಳಿ ಮಕ್ಕಳು ಜನಿಸಿದರು. ಈ ಇಬ್ಬರು ಅಣ್ಣ ತಂಗಿಯರು ತಾರುಣ್ಯದವರೆಗೂ ಒಬ್ಬರಿಗೊಬ್ಬರು ಆಸರೆಯಾಗಿ ಬದುಕಿದರು. ತಾಯ್ತಂದೆಗಳಿಲ್ಲದ ಇವರಿಗೆ ವಿವಾಹ ಕಾರ್ಯವನ್ನು ನೆರವೇರಿಸಲು ಯಾರೂ ಇಲ್ಲವಾಗಿದ್ದರು. ತಾರುಣ್ಯದಲ್ಲಿ ಯಮೀ ತನನ್ನು ಸೇರುವಂತೆ ಅಣ್ಣ ಯಮನನ್ನು ಕೇಳಿದಳು ಏನೆಲ್ಲ ವಾದ ಹೂಡಿದಳು. ಯಮ ತಂಗಿಯ ಬಯಕೆಯನ್ನು ಒಪ್ಪದೇ, ಅದು ಅಧರ್ಮವೆಂದು ಹೇಳಿ ನೀನು ಬೇರೊಬ್ಬ ತರುಣನನ್ನು ಹುಡುಕಿ ಬಾಳು ಎಂದು ತಾನು ಮುನ್ನಡೆದು ಪರ್ವತ ರಾಜ್ಯವನ್ನು ಸೇರಿದನು. ಅಲ್ಲಿನ ರಾಜನಳಿದಿರಲು ಜನ ಯಮನನ್ನು ರಾಜನನ್ನಾಗಿ ಆರಿಸಿದರು. ಒಮ್ಮೆ ಕ್ಷಾಮ ತಲೆದೋರಿದಾಗ ಕಂಗಲಾಗಿ ಯಜ್ಞವನ್ನು ಕೈಗೊಂಡು ತಾನೇ ಯಜ್ಞಪಶುವಾದ, ಯಜ್ಞಕುಂಡದಿಂದೆದ್ದ ಪುರುಷ ಆತನನ್ನು ಮೆಚ್ಚಿ ಯಮಧರ್ಮ ಪದವಿಯನ್ನು ನೀಡಿದ.

ಉತ್ತಮ ಮನ್ವಂತರದಿ ಕಾಮ ಒಡ್ಡಿದ ಪ್ರಶ್ನೆ
ಒಮ್ಮೆ ದೀರ್ಘಕೆ ಬಂದು ಪಡೆಯಿಕೊಂದುತ್ತರವ
ಸ್ತ್ರೀಪುರುಷರಂಗಗಳ ಅನ್ಯೋನ್ಯತೆಯು
ವಿಭಿನ್ನಾಭಿವ್ಯಕ್ತಿ ಆವಿರ್ಭಾವಗಳ ಪಡೆದು
ಅಬ್ಬೇಯಲಿ ವಾತ್ಸಲ್ಯ – ಅಕ್ಕರೆ, ಅಕ್ಕ – ತಂಗಿಯೊಳು
ನಲ್ಲೆಯಲಿ ನಲುಮಯಿಹುದೆಂದು ಮನದಟ್ಟಾಯಿತು[9]

**ಭುಜ್ಯುವಿನ ಧರ್ಮ ಸಮಸ್ಯೆ:–** ಚತುರ್ಥ ಮನುವಾದ ಕಾಮಸನ ಸೋದರನಾದ ಪಂಚಮ ಮನು ರೈವತ ರಾಜ್ಯವಾಳುತ್ತಿದ್ದ ಸಮಯ, ಆತನ ನೆರೆ ರಾಜ್ಯವನ್ನು ತುಗ್ರ ಎಂಬ ಮಹಾರಾಜ ಆಳುತ್ತಿದ್ದ ಆತನ ಮಗ ಭುಜ್ಯ. ರಾಣಿ ಘೋಷಾದೇವಿ, ಭುಜ್ಯುವಿನ ಮಲತಾಯಿ. ಇವರು ಇಂದ್ರನ ಭಕ್ತರಾಗಿದ್ದರು. ಭುಜ್ಯು ಅಶ್ವಿನಿದೇವತೆಗಳ ಭಕ್ತನಾಗಿದ್ದನು. ಅಶ್ವಿನಿ ದೇವತೆಗಳು ಆತನಿಗೆ ಒಲಿದಿದ್ದರು. ಜನರ ಕಣ್ಮಣಿ ಎನಿಸಿದ್ದ ಭುಜ್ಯು. ಆತ ಅಶ್ವಿನಿ ದೇವತೆಗಳ ಭಕ್ತನಾಗಿರುವುದು ಘೋಷರಾಣಿಯ ಅಸಮಾಧಾನಕ್ಕೆ ಕಾರಣವಾಗಿತ್ತು. ರಾಜ ಆಕೆಯನ್ನು ಸಮಾಧಾನ ಪಡಿಸುತ್ತಾ.

....ಇಂದ್ರ ಪೂಜೆಯೊಳಿಹುದು ಭುಜ್ಯುವಿಗೆ
ಶ್ರದ್ಧೆ ತ್ರೈಲೋಕ್ಯ ದೇವತೆಗಳೆಲ್ಲರು ಒಂದೇ
ಸಮಕೋಟಿ, ಸಮಭಾವನೆಂದವನು ನಂಬಿಹನು
ಆರಾಧ್ಯ ದೈವತ ತನಗೆ ಅಶ್ವಿನಿಗಳೆಂದಿಹನು
ಅವರವರ ಆರಾಧ್ಯ ದೈವತದ ಸ್ವಾತಂತ್ರ್ಯ
ಉಪಾಸಕರಿಗಿಹುದು..
ಇದನ್ನು ಕೇಳಿ ಸಿಡಿದಳು ಘೋಷಿರಾಣಿ.[10]

ಇದೇ ಸಮಯಕ್ಕೆ ಜಂಬದ್ವೀಪಿಗಳು ತುಗ್ರರಾಜ್ಯದ ಜನರಿಗೆ ತೊಂದರೆ ಕೊಡುತ್ತಿರುವ ವಿಚಾರ ತಿಳಿದು ಅಲ್ಲಿಗೆ ದಂಡೆತ್ತಿ ಹೋಗುವಂತೆ ಅವರ ನಾಯಕನಾಗಿ ಭುಜ್ಯುವನ್ನು ನೇಮಿಸುವಂತೆ

ಘೋಷರಾಣಿ ತಾಕೀತು ಮಾಡುತ್ತಾಳೆ. ಒಲ್ಲದ ಮನಸ್ಸಿನಿಂದ ಭುಜ್ಯುವನ್ನು ಜಂಬದ್ವೀಪಕ್ಕೆ ಸೈನ್ಯ ಸಮೇತ ಕಳಿಸುತ್ತಾನೆ. ಅಶ್ವಿನಿ ದೇವತೆಗಳ ಸಹಾಯದಿಂದ ಜಂಬದ್ವೀಪವನ್ನು, ಅಲ್ಲಿರುವವರ ಮನಸ್ಸನ್ನು ಗೆದ್ದು ಭುಜ್ಯು ಹಿಂದಿರುಗುತ್ತಾನೆ. ಈ ನಡುವೆ ಘೋಷರಾಣಿ ತೊನ್ನಿನಿಂದ ಬಳಲಿ ಯಾವ ಔಷಧದಿಂದಲೂ ವಾಸಿಯಾಗದೆ ಬಳಲಿರುತ್ತಾಳೆ. ಆಗ ಕನಸಿನಲ್ಲಿ ಬಂದ ಮಹೇಂದ್ರ..

ಅಪಶ್ರದ್ಧೆಯಾಗುವುದು ನನ್ನ ಮೇಲಿನ ಶ್ರದ್ಧೆ
ಅಪಕಾಮವನು ತೋರಲಿನ್ನೋರ್ವ ದೈವತರೆ
ಅಸಮಾಕ್ಷಳಿರುವದೊಂದಪರಾಧವಾಗುವುದು
ಉಜಿತ–ಪುರಣ ವನೋದ ದೇವತೆಗಳ ಮಧ್ಯೆ
ನರರಿಗಾಸ್ಪದವಿಲ್ಲವಿಂಥ ಹಗರಣದಲ್ಲಿ
ಅಸಡ್ಡೆಯನು ತೋರೆಯುತಶ್ವೀನಿ ಪೂಜೆಯಲಿ[11]
ಸ್ಥಿರವಿಲು ಚಿತ್ರ ತ್ವಕ್ ರೋಗವಳಿಯುವುದು ತಾನೆ ಎಂದನು

ಭುಜ್ಯುವಿನ ಬರುವಿಕೆ ಘೋಷರಾಣಿಗೆ ಹರ್ಷತಂದಿತು, ಭುಜ್ಯುವನ್ನು ಮಗನೆಂದು ಒಪ್ಪಿಕೊಂಡ ಆಕೆಯ ಮನಸ್ಸಿನಲ್ಲಿ ಶಾಂತಿ ನೆಲಸಿತು. ಈ ಸಂಧಿಯಲ್ಲಿ ಕವಿ ದೇವತೆಗಳ ಹೆಸರಿನಲ್ಲಿ ಜನರ ನಡುವೆ ಒಡಕು ಮೂಡಿರುವುದನ್ನು ಸೂಚಿಸುತ್ತಾರೆ. ತುಗ್ರನ ಕೈಯಲ್ಲಿ ಉಪಾಸನೆಯ ಸ್ವಾತಂತ್ರ್ಯ ಎಲ್ಲರಿಗೂ ಇದೆ ಎಂದು ಹೇಳಿಸುತ್ತಾರೆ. ಇದು ಪ್ರಸ್ತುತ ದೇವರುಗಳ ಧರ್ಮದ ವಿಚಾರದಿಂದ ಮೂಡಿರುವ ಸಮಸ್ಯೆಗೆ ಪರಿಹಾರವೂ ಆಗಿದೆ.

**ಟಿಪ್ಪಣಿಗಳು:**

1. ಭಾರತ ಸಿಂಧುರಶ್ಮಿ ಸಂಪುಟ 1 2006 ಪರಿಮಳ ಮುದ್ರಣಾಲಯ ಪೀಠಿಕಾ ಸಂಧಿ ಪುಟ 27
2. ಭಾರತ ಸಿಂಧುರಶ್ಮಿ ಸಂಪುಟ 1 2006 ಪರಿಮಳ ಮುದ್ರಣಾಲಯ ಪೀಠಿಕಾ ಸಂಧಿ ಪುಟ 19
3. ಭಾರತ ಸಿಂಧುರಶ್ಮಿ ಸಂಪುಟ 1 2006 ಪರಿಮಳ ಮುದ್ರಣಾಲಯ ಪೀಠಿಕಾ ಸಂಧಿ ಪುಟ 28
4. ಭಾರತ ಸಿಂಧುರಶ್ಮಿ ಸಂಪುಟ 1 2006 ಪರಿಮಳ ಮುದ್ರಣಾಲಯ ಪೀಠಿಕಾ ಸಂಧಿ ಪುಟ26
5. ಭಾರತ ಸಿಂಧುರಶ್ಮಿ ಸಂಪುಟ 1 2006 ಪರಿಮಳ ಮುದ್ರಣಾಲಯ ಪೀಠಿಕಾ ಸಂಧಿ ಪುಟ 17
6. ಭಾರತ ಸಿಂಧುರಶ್ಮಿ ಸಂಪುಟ 1 2006 ಪರಿಮಳ ಮುದ್ರಣಾಲಯ ಪೂರ್ವಾಪರ ಕಾಂಡ ಪುಟ 2
7. ಭಾರತ ಸಿಂಧುರಶ್ಮಿ ಸಂಪುಟ 1 2006, ಪೂರ್ವಾಪರ ಕಾಂಡ ಪುಟ ೧೪
8. ಭಾರತ ಸಿಂಧುರಶ್ಮಿ ಸಂಪುಟ 1 2006 ಪೂರ್ವಾಪರ ಕಾಂಡ ಪುಟ **42**
9. ಭಾರತ ಸಿಂಧುರಶ್ಮಿ ಸಂಪುಟ 1 2006 ಪೂರ್ವಾಪರ ಕಾಂಡ ಪುಟ 63
10. ಭಾರತ ಸಿಂಧುರಶ್ಮಿ ಸಂಪುಟ 1 2006 ಪೂರ್ವಾಪರ ಕಾಂಡ ಪುಟ 70
11. ಭಾರತ ಸಿಂಧುರಶ್ಮಿ ಸಂಪುಟ 1 2006 ಪೂರ್ವಾಪರ ಕಾಂಡ ಪುಟ 90

**ಪರಾಮರ್ಶನ ಗ್ರಂಥಗಳು**


1. ಭಾರತ ಸಿಂಧುರಶ್ಮಿ ಸಂಪುಟ 1 ವಿ ಕೃ ಗೋಕಾಕ, 2006 ಪರಿಮಳ ಮುದ್ರಣಾಲಯ
2. ಭಾರತಸಿಂಧು ರಶ್ಮಿ:ಪುನರಾವಲೋಕನ, ಪ್ರಧಾನ ಸಂಪಾದಕರು–ಪ್ರೊ. ಕೆ.ಎನ್ ಗಂಗಾನಾಯಕ 2012, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು